ಮಧ್ಯಮ ನೀರಾವರಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಬೆಳಗಾವಿ ಜಿಲ್ಲೆ, ಬೈಲಹೊಂಗಲ ತಾಲ್ಲೂಕಿನ ಸಂಗೊಳ್ಳಿ ಗ್ರಾಮ ಮುನರ್ವಸತಿ ಹೊಂದಿದ ಗ್ರಾಮವಾಗಿದ್ದು, ಇಲ್ಲಿನ ಜನರ ಅನುಕೂಲತೆಗಾಗಿ ಆಗ್‌ಮೆಂಟೇಶನ್ ಯೋಜನೆಯಡಿಯಲ್ಲಿ ನೀರಾವರಿ ಸೌಲಭ್ಯ ಕಲ್ಪಿಸಲು ಅಂದಾಜು ವೆಚ್ಚ ಪತ್ರಿಕೆ ತಯಾರಿಸಲಾಗಿದೆಯೆ? ಹಾಗಿದ್ದಲ್ಲಿ ಈ ಯೋಜನೆಗೆ ಎಷ್ಟು ವೆಚ್ಚ ತಗಲುವುದು? ಎಷ್ಟು ಎಕರೆ ಜಮೀನಿಗೆ ನೀರಾವರಿ ಸೌಲಭ್ಯ ಸಿಗುವುದು?

ಆ) ಈ ಯೋಜನೆ ಎಂದಿನಿಂದ ಪ್ರಾರಂಭಿಸಲಾಗುವುದು ಹಾಗೂ ಈ ಯೋಜನೆ ಮುಗಿಯಲು ಬೇಕಾಗುವ ಕಾಲಾವಧಿ ಎಷ್ಟು?

ಶ್ರೀ ಎಚ್.ಕೆ.ಪಾಟೀಲ್ (ಭಾರಿ ಮತ್ತು ಮಧ್ಯಮ ನೀರಾವರಿ ಸಚಿವರು):

ಅ) ಬೈಲಹೊಂಗಲ ತಾಲ್ಲೂಕಿನ ಸಂಗೊಳ್ಳಿ ಗ್ರಾಮದ ಹತ್ತಿರ ಆಗ್‌ಮೆಂಟೇಶನ್ ಮಾಡುವ ಪ್ರಸ್ತಾವನೆಯ ಪ್ರಾಥಮಿಕ ವರದಿ ತಯಾರಿಸಲಾಗಿದೆ. ಈ ಯೋಜನೆಗೆ ತಗಲುವ ಅಂದಾಜು ವೆಚ್ಚ ರೂ. 192.21 ಲಕ್ಷ. ಈ ಯೋಜನೆಯಿಂದ 99030 ಎಕರೆ ಜಮೀನಿಗೆ ಹಾಲಿ ಇರುವ ನೀರಿನ ಕೊರತೆ ನಿವಾರಿಸಲು ಉದ್ದೇಶಿಸಲಾಗಿದೆ.

ಆ) ಮಲಪ್ರಭಾ ಯೋಜನೆಯ ನೀರಿನ ಕೊರತೆ ನಿವಾರಿಸಲು ಕೆಲವು ಪರ್ಯಾಯ ಪ್ರಸ್ತಾವನೆಗಳು ಪರಿಶೀಲನೆಯಲ್ಲಿವೆ. ಇವು ಅಂತಿಮಗೊಂಡ ನಂತರ ಸದರಿ ಯೋಜನೆಯನ್ನು ಕಾರ್ಯಗತಗೊಳಿಸಲಾಗುವುದು.

ಬೆಳಗಾಂವ್ ಜಿಲ್ಲೆ ಬೈಲಹೊಂಗಲ ಮತ ಕ್ಷೇತ್ರದಲ್ಲಿ ಬರುವ ಚಿಕ್ಕ ನೀರಾವರಿ ಇಲಾಖೆಯ ಕೆರೆಗಳ ಹೂಳು ತೆಗೆಯುವ ಬಗ್ಗೆ.

2237(2903)

ಶ್ರೀ ಎಂ.ಎಸ್.ಕೌಜಲಗಿ (ಬೈಲಹೊಂಗಲ): ಮಾನ್ಯ ಸಣ್ಣ ನೀರಾವರಿ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ?

ಅ) ಸರ್ಕಾರ ಬೆಳಗಾಂವ ಜಿಲ್ಲೆಯಲ್ಲಿನ ಸಣ್ಣ ನೀರಾವರಿ ಇಲಾಖೆಯ ಕೆರೆಗಳ ಹೂಳನ್ನು ತೆಗೆಯಲು ಯಾವ ವಿಶೇಷ ಕಾರ್ಯಕ್ರಮ ಹಾಕಿಕೊಂಡಿದೆ.

ಆ) ಕೋಲಾರ ಜಿಲ್ಲೆಯಲ್ಲಿ ಚಿಕ್ಕ ನೀರಾವರಿ ಇಲಾಖೆಯ ಕೆರೆಗಳ ಹೂಳು ತೆಗೆಯಲು ಹಾಕಿಕೊಂಡ ಕಾರ್ಯಕ್ರಮ ಮಾದರಿಯಲ್ಲಿ ಬೆಳಗಾಂ ಜಿಲ್ಲೆಯಲ್ಲಿಯೂ

ಸಹ ವಿಶೇಷ ಕಾರ್ಯಕ್ರಮ ಹಾಕಿಕೊಳ್ಳಲಾಗುವುದೇ.

ಇ) ಬೆಳಗಾಂವ ಜಿಲ್ಲೆ ಬೈಲಹೊಂಗಲ ತಾ:ಕಿನ ಸಿದ್ದಸಮುದ್ರ ದೂಡವಾಡ ಹಾಗೂ ಸವದತ್ತಿ ತಾಲ್ಲೂಕಿನ ಹಿರೇಕೊಪ್ಪ ಹಿರೇಬೂದನೂರ ಮಳಗಲಿ ಇಂಚಲ ಹಾಗೂ ಮರಕುಂಬಿ ಗ್ರಾಮಗಳ ಕೆರೆಗಳಲ್ಲಿ ಇರುವ ಹೂಳನ್ನು ತೆಗೆಯಲು ವಿಶೇಷ, ಕ್ರಮ ಹಮ್ಮಿಕೊಳ್ಳಲಾಗುವುದೇ,(ಕೋಲಾರ ಜಿಲ್ಲೆ ಮಾದರಿಯಲ್ಲಿ)

ಈ) ಹಾಗಿದ್ದಲ್ಲಿ, ಈ ಮೇಲೆ ಬರೆದ ಕೆರೆಗಳ ಹೂಳನ್ನು ತೆಗೆಯಲು ಅಂದಾಜು ವೆಚ್ಚ ಎಷ್ಟು, ಹಾಗೂ ಯಾವ ಯೋಜನೆಯಲ್ಲಿ ಸರ್ಕಾರ ಈ ಕೆಲಸವನ್ನು ಹಮ್ಮಿಕೊಳ್ಳುವುದು.

ಶ್ರೀ ಎಸ್.ಕುಮಾರ್ ಬಂಗಾರಪ್ಪ (ಸಣ್ಣ ನೀರಾವರಿ ರಾಜ್ಯ ಸಚಿವರು):

ಅ) ರೈತರ ಸಹಯೋಗದಿಂದ ಹೂಳನ್ನು ತೆಗೆಯುವ ಕಾರ್ಯಕ್ರಮ ಹಾಕಿಕೊಂಡಿದೆ. ಈ ಜಿಲ್ಲೆಯೂ ಸೇರಿದಂತೆ ಮುಂದಿನ 5 ವರ್ಷಗಳಲ್ಲಿ ಕೆರೆಗಳ ಹೂಳನ್ನು ತೆಗೆಯಲು, ಅಭಿವೃದ್ಧಿಪಡಿಸುವ ಸಮಗ್ರ ಯೋಜನೆಯನ್ನು ಸಹ ರೂಪಿಸುತ್ತಿದೆ. (ವಿಶ್ವ ಬ್ಯಾಂಕ್ ನೆರವಿನೊಂದಿಗೆ)

ಆ) ತಾಂತ್ರಿಕವಾಗಿ ಪರಿಶೀಲಿಸಿ ಸೂಕ್ತ ಕಾರ್ಯಕ್ರಮ ಹಾಕಿಕೊಳ್ಳಬೇಕಾಗುತ್ತದೆ.

ಇ) ಸವದತ್ತಿ ತಾಲ್ಲೂಕಿನ ಇಂಚಲ ಕೆರೆಯ ಹೂಳೆತ್ತುವ ಕೆಲಸ ಹಮ್ಮಿಕೊಳ್ಳಲಾಗಿದೆ. ಉಳಿದ ಗ್ರಾಮಗಳ ಕೆರೆಯ ಹೂಳೆತ್ತುವ ಕಾರ್ಯವನ್ನು ತಾಂತ್ರಿಕ ಹಾಗೂ ಆರ್ಥಿಕ ಲಭ್ಯತೆಗೆ ಅನುಗುಣವಾಗಿ ಹಮ್ಮಿಕೊಳ್ಳಲಾಗುವುದು.

ಈ) ಇಂಚಲ ಕೆರೆಯ ಹೂಳೆತ್ತುವ ಕಾಮಗಾರಿಗೆ ಮಾತ್ರ 10 ಲಕ್ಷ ರೂ.ಗಳ ಅಂದಾಜು 3 ಲಕ್ಷ ರೂ.ಗಳ ಅನುದಾನದಲ್ಲಿ ಮಂಜೂರಾತಿ ನೀಡಿದೆ. ಉಳಿದ ಗ್ರಾಮಗಳ ಕೆರೆಗಳನ್ನು ಆರ್ಥಿಕ ಲಭ್ಯತೆಯ ಮೇರೆಗೆ ರೈತರ ಸಹಯೋಗದ ಯೋಜನೆಯಡಿಯಲ್ಲಿ ಕೈಗೊಳ್ಳಲು ಪರಿಶೀಲಿಸಲಾಗುವುದು.

ಬೆಂಗಳೂರು ನಗರಕ್ಕೆ ಕಾವೇರಿ ನದಿ ನೀರಿನ ೪ನೇ ಹಂತದ ಎರಡನೇ ಘಟ್ಟದ ಹಾಗೂ ೫ನೇ ಹಂತದ ಯೋಜನೆಗಳ ಬಗ್ಗೆ.

2238(2808)

ಶ್ರೀ ಕಟ್ಟಾ ಸುಬ್ರಮಣ್ಯ ನಾಯ್ಡು (ಶಿವಾಜಿನಗರ): ಮಾನ್ಯ ಮುಖ್ಯ ಮಂತ್ರಿಯವರು ಈ ಕೆಳಕಂಡ ಪ್ರಶ್ನೆಗಳಿಗೆ ಉತ್ತರಿಸುವರೆ?